ಸ್ಟಾಕು ಮಾಡಿಟ್ಟ ಸಕ್ಕರೆ ಚೀಲಗಳು, ಬಿಸಿಲೂರಿಂದ ತಂದು ಊರಲ್ಲಿ ಮಾರಿ ಲಾಭ ಮಾಡಿಕೊಳ್ಳಲು ಗೋಡೋನಿನಲ್ಲಿ ತುಂಬಿಟ್ಟ ಗೊಬ್ಬರದ ಚೀಲಗಳು ಎಲ್ಲ ರಾತ್ರೋರಾತ್ರಿ ನೀರು ಪಾಲಾಗಿ ಹೋಗಿದ್ದವು. ಯಾವ ಹೊಸಬ ಊರಿಗೆ ಕಾಲಿಟ್ಟರೂ ಏನಾದರೂ ಸಹಾಯ ತಂದನೇನೋ ಎಂಬ ಕಾತರ ಮತ್ತು ಕುತೂಹಲ. ಗಂಜಿ ಕೇಂದ್ರದಲ್ಲಿ ರಾತ್ರಿಯಡುಗೆ ತಯಾರಿಸುತ್ತಿದ್ದ ವ್ಯಕ್ತಿಯೂ ಸೇರಿದಂತೆ ಪ್ರತಿಯೊಬ್ಬರಿಗೂ ತಮಗಾದ ನಷ್ಟದ ಪ್ರಮಾಣವನ್ನು ಹೇಳಿಕೊಳ್ಳುವ ಆಸೆ.

'ಸಾರು ನೀರು ಅಷ್ಟೆತ್ತರ ಬಂದಿದ್ವು ನೋಡ್ರೀ' ಎಂದ ಒಬ್ಬ ಗುಡಿಯ ಕಳಸದ ಮೇಲಾಗಿದ್ದ ಕಸದ ಗುರುತನ್ನು ತೋರಿಸುತ್ತ. ಅಷ್ಟೇ ಎತ್ತರದಲ್ಲಿ ಲೈಟು ಕಂಬದ ಮೇಲೂ ಅಂತ ಗುರುತಿದ್ದುದನ್ನು ಮತ್ತೊಬ್ಬ ತೋರಿಸಿದ.

ಕುತೂಹಲ ತಾಳದೆ ಬಾಲಕೃಷ್ಣ ಊರ ಮುಂದೆ ಬಿದ್ದಿರುವ ಬಟ್ಟೆಗುಡ್ಡೆಗಳ ಬಗ್ಗೆ ಕೇಳಲಾಗಿ

'ಏನ್ ಹೇಳಬೇಕು ಸಾರು, ಅವುಟ್ಟುನ್ನ ಯಾರು ಉಡ್ತಾರ ಅಂತ ತರ್ಲಾರೋ ಗೊತ್ತಿಲ್ಲ. ನಾವಂತೂ ಅವುಟ್ಟುನ್ನ ಮುಟ್ಟೆ ಗುಡ ನೋಡಿಲ್ಲ. ಎಲ್ಲ ಬಳಸಿ ಹರ್ದುಹೋಗಿರವ್ವೀ ಅವು. ನಮ್ ಹಳ್ಳ್ಯಾಗ ಕೌದಿ ಹೊಲ್ಯಾಕೂನು ಹಾಕದಿಲ್ಲ ಅಂಥವುಟ್ಟುನ್ನ. ಅಲ್ರೀ ಹೊಳೆದಂಡೆಗೆ ಹೊಲಗಳಿರ ಮಂದಿ ನಾವು. ಚೀಲಗಟ್ಟಲೆ ಬೆಳಿತೀವಿ. ಹರಕು ಬಟ್ಟೆ ಹೇರಿಕೆಂಡು ಬಂದು ಭಿಕ್ಷೆ ಬೇಡವ್ರ ಮುಂದ ಹಾಕಿದಂಗ ಕುಪ್ಪೆ ಕುಪ್ಪೆ ಹಾಕಿಹೋದ್ರೆ ಹೌದಂತಾರೇನ್ರೀ? ಮಳೆ ನಮ್ ಮನೆ ಮಠ ಎಲ್ಲ ಹೊಡಕಂಡ್ ಹೋಗ್ಯಾದ್ರಿ ಇಲ್ಲಂಬದಿಲ್ಲ; ಆದ್ರೆ ದುಡಕಂಡು ತಿಂಬ ದೈರ್ಯನ್ನೇನು ಹೊಡಕಂಡು ಹೋಗಿಲ್ಲಲ್ರಿ. ನಾಕು ದಿನ ಒರೆ ಮೈಲೇ ಇರ್ತೀವಿ ಏನಾಗುತ್ತ ಸಾಯ್ತೀವ್ಯಾ?'

ಮೂರ್ನಾಕು ದಿನದಿಂದ ತುಂಬಿಕೊಂಡಿದ್ದ ಸಿಟ್ಟೆಲ್ಲವನ್ನು ಒಂದೇ ಉಸುರಿನಲ್ಲಿ ಕಾರಿಕೊಂಡ ಯುವಕ, ಆ ಬಗ್ಗೆ ಮತ್ತೆ ಮಾತಾಡುವುದೇ ಹೇಸಿಗೆ ಎಂಬಂತೆ ಕ್ಯಾಕರಿಸಿ ನೆಲಕ್ಕೆ ತುಪ್ಪಿ ನಡೆದೇ ಬಿಟ್ಟ.

ಭಾರವಾದ ಹೆಜ್ಜೆಗಳನ್ನಿಡುತ್ತ ಗುಡಿ ಕಟ್ಟೆ ಹತ್ತಿರ ಬಂದರು. ಗುಡಿ ಹಿಂದಲ ಜಾಲಿಗಿಡದ ಕೆಳಗೆ ಒಬ್ಬಾತ ಜಬರ್ದಸ್ತಾಗಿ ಬಾಯ್ತುಂಬ ಅಡಿಕೆ ಹಾಕಿಕೊಂಡು ಜಗಿಯುತ್ತ ಕುಳಿತಿದ್ದ.

'ಊಟ ಆಯ್ತೇನಪ ಯಜಮಾನ? ಆರಾಮು ಅಡಿಕೆ ಹಾಕ್ಕೆಂಡು ಕುಂತಿದ್ದಿ?' ಎಂದು ಮಾತಿಗೆಳೆದ ಅಬ್ದುಲ್ಲ.

'ಏನ್ ಊಟರೀ ಸಾಯೇಬ್ರೆ, ಆ ಊಟಕ್ಕ ಬೆಂಕ್ಯಚ್ಚ. ಈ ಜನ್ಮ ಇರಬಾರದ್ರಿ. ಮಳ್ಯಾಗ ಆ ಶಿವನು ನಮ್ಮುನ್ನಾರ ಹೊಡಕಂಡ್ ಹೋಗಿದ್ರೆ ಛೇಸಿತ್ತು' ಎಂದು ನಿಟ್ಟುಸಿರುಗರೆದ.

'ಅಲ್ಲಪ ಯಜಮಾನ, ಇರಾಕ ಹೋಗಾಕ ಅದೆಲ್ಲ ಏನ್ ನಮ್ ಕೈಯಾಗಿನ ಮಾತಾ? ಅಲ್ಲ ಅಡಿಗೆ ಮಾಡ್ಯಾರಲ? ಉಣಬೇಕಿಲ್ಲ?' ಎಂದ ಅಬ್ದುಲ್ಲ.

'150 ಕುರಿ ಮಾಲೀಕರಿ ನಾನು. ದೇವ್ರು ಒಂದು ಮರಿ ಸಹಿತ ಉಳಿಸ್ಲಿಲ್ಲ ನಮ್ ಪಾಲಿಗೆ. ಅಲ್ಲಿ ಸಾಲ್ಯಾಗ ಊಟಕ್ಕಂತ ಹೋದ್ರೆ ಅಡಿಗೆ ಮಾಡವ್ರು, ನೀಡವ್ರು ನಮ್ಮೂರವ್ರೇ ನೋಡ್ರಿ ನಿಮಗ ಹೇಳ್ತೀನಿ: ನನ್ನವೇ ಕುರಿ ಆವ ಅಂತ ಏನು ಮರಿತಿದ್ದನಪ. ಈಗ ನೋಡು ಎಂಗಾದ. ಗಾ ಹುಳ್ಳಗ ಎಂಗ ಬಂದಾನ ನೋಡಿದ್ಯಾ ಊಟಕ್ಕ' ಅಂತ ಮೂಗು ಮುರಿದು ಮಾತಾಡ್ತಾರ್ರೀ. ಎದುರಿಗೇ ಕೇಳಸಂಗ ಆಡಿಕೆಂತಾರ. ಕಣ್ಣಾಗೇ ನಗುತಾರ್ರಿ ನನ್ನ ನೋಡಿ" ಎನ್ನುತ್ತ ದುಃಖ ತಡೆದುಕೊಳ್ಳಲಾಗದೆ ಆತ ಹೆಗಲ ಮೇಲಿನ ಶಲ್ಲೆಯಿಂದ ಕಣ್ಣೀರು ಒರೆಸಿಕೊಂಡು ಗದ್ಗದಿತನಾದ.

'ನಕ್ಕವರವು ಹಲ್ಲು ಕಾಣಸ್ತಾವ ಬುಡಪ ಅದಕ್ಯಾಕ ಚಿಂತೆ ಮಾಡ್ತಿದಿ? ನೀನೇನು ರೊಟ್ಟಿಗೆ ಪಲ್ಲೆ ಹಚ್ರೆಪ ಅಂತ ತಾಟಿಡಕಂಡು ಅವರ ಮನಿತನಕ ಹೋಗ್ತೇನು? ಇಲ್ಲಲ. ಸರ್ಕಾರ ಮಾಡ್ಯಾದ ಎಲ್ಲರ ಸಲುವಾಗಿ" ಎಂದು ಸಂತೈಕೆಯ ಮಾತಾಡಿದ ಅಬ್ದುಲ್ಲ.

'ಊರಾಗ ನಾನಂಬ ಸೂಳೆಮಗನ ಕುಡ ಹಿಂಗ ಬೊಳ್ಳು ತೋರಿಸಿಕೊಂಡು ಬದುಕಿದ ಮಗ ಅಲ್ರಿ ನಾನು. ಈ ಮಳೆ ಬಂದು ನಮ್ಮಕಥೆ ನಾಯಿ ನರಿಗಳೆಲ್ಲ ಆಡಿಕೆಂಡು ನಗಂಗಾಯ್ತ್ರಿ. ಉಪಾಸಾ ಇರ್ತೀನಾಗ್ಲಿ ಉಪದ್ರದ ಮಾತು ಅನಿಸಿಕೆಂಬದಾಗದಿಲ್ರಿ ನನ್ ಕೈಲೆ. ಅದಿಕ್ಕೆ ಇಲ್ನೋಡ್ರಿ ಗಾ ಅಡಿಕೆ ನಮಿಲಿ ಹಸುವು ಸಾಯ್ಲಾಕತ್ತೀನಿ' ಎನ್ನುತ್ತ ಬಾಯ್ತುಂಬಿದ ಅಡಿಕೆಯನ್ನು ಮತ್ತೊಂದು ಬದಿಗೆ ಸರಿಸಿಕೊಂಡು ದುಃಖದೊಂದಿಗೆ ಜಬಡತೊಡಗಿದ.

'ಟೊಂಯ್ ಟೊಂಯ್''ಅಂತು ಅಬ್ದುಲ್ಲನ ಮೊಬೈಲು. ತೆಗೆದು ನೋಡಿ ಎರಡೂ ಮೆಸೇಜ್ ಓದಿ 'ಥುತ್ ಇವನಮ್ಮನ್ನಾಡ' ಅಂದ ತನಗಷ್ಟೇ ಕೇಳಿಸುವಷ್ಟು ಕ್ಷೀಣ ಧ್ವನಿಯಲ್ಲಿ.

'ಏನಾಯ್ತ್ರೀ ಅಬ್ದುಲ್?' ಎಂದ ತಿಮೋತಿ.

'ವರ್ಷಪೂರ್ತಿ ಈ ಮಕ್ಳು ಇದೇ ಕೆಲಸ ಮಾಡಿಕೆಂಡೇ ಸಂಸಾರ ನಡಸ್ತಾರ. ಅವನು ತಪ್ಪಿದರೆ ಇವನು; ಇವನು ತಪ್ಪಿದರೆ ಅವನು. ಈಗ ಇಬ್ರೂ ಸೇರೇ ಸುರು ಹಚ್ಚಿಕೊಂಡಾರ. ಮನುಷ್ಯ ಆದವನಿಗೆ ಸ್ವಲ್ಪನ್ನ ನಾಚಿಕೆ ಬೇಕಲ್ರಿ? ಥುತ್' ಅಂದ.

'ಯಾರ್ರಿ? ಏನಾಯ್ತು? ಬಿಡಿಸೆರ ಹೇಳ್ರಿ' ಕೇಳಿದ ತಿಮೋತಿ.

'ಅವನು ಹಿರೇಮಠ್ ಮತ್ತೆ ಆ ಪ್ರಧಾನ್ ಇಬ್ರೂ ಸೇರಿ ಪ್ರವಾಹ ಪೀಡಿತರ ಸಹಾಯಾರ್ಥ ರಂಗಮಂದಿರದಲ್ಲಿ ನಾಟಕ ಆಡಿಸ್ತಾರಂತ. ಒಂದು ಹತ್ತು ಟಿಕೆಟ್ ಮಾರಿಸಿಕೊಡ್ರಿ ಅಂತ ಮೆಸೇಜ್ ಕಳಿಸ್ಯಾರ. ಹಿಂದಕ ಆ ಈ ಕಲಾವಿದರ ಸಹಾಯಾರ್ಥ ಅಂತ ಮಾಡಿದಾಗ ಮಾರಿಕೊಟ್ಟು ಎಲ್ಲ ನೋಡಿಕೆಂಡೀನಿ ಈ ಮಕ್ಳುದು. ಅದರಾಗ ಅರ್ಧ ತಾವು ನುಂಗಿ, ಉಳಿದದ್ದು ಇಷ್ಟು ಆ ಕಲಾವಿದನ ಮೂತಿಗಿ ಒರಸ್ತಾರಂತ ನನಗ ಆಮ್ಯಾಲೆ ಗೊತ್ತಾಯ್ತು'

**8**

'ಮಳೆಯಿಂದಾಗಿ ಅಂದಾಜು ಹದಿನೇಳು ಸಾವಿರ ಕೋಟಿ ರೂಪಾಯಿ ಹಾನಿಯಾಗಿದೆ'

ಸಿಎಂ ಮಾಧ್ಯಮದವರ ಮೈಕುಗಳ ಮುಂದೆ ನಿಂತು ಮಾತಾಡುತ್ತಿದ್ದುದು ಟೀವಿಯಲ್ಲಿ ಪ್ರಸಾರವಾಗುತ್ತಿತ್ತು. ಮಳೆಸಂತ್ರಸ್ತರಿಗಾಗಿ ದೇಣಿಗೆ ಸಂಗ್ರಹ ಉದ್ದೇಶದಿಂದ ರಾಜಧಾನಿಯಲ್ಲಿ ಆಯೋಜಿಸಿದ್ದ ರೋಡ್ ಶೋಗೆ ಜನರಿಂದ ಅಭೂತಪೂರ್ವ ಬೆಂಬಲ ವ್ಯಕ್ತವಾದದ್ದು ಸಹಜವಾಗಿ ಸಿಎಂ ಅನ್ನು ಪುಳಕಗೊಳಿಸಿತ್ತು. ಎರಡೇ ದಿನದಲ್ಲಿ ಆರು ನೂರಾ ನಲವತ್ತು ಕೋಟಿ ರೂಪಾಯಿ ದೇಣಿಗೆ ಸಂಗ್ರಹವಾಗಿತ್ತು. ಸಿಎಂ ಹೇಳುತ್ತಲೇ ಇದ್ದರು

'ಸಿರಿವಂತರ ಮೇಲೆ ನೆರೆ ಕರ ವಿಧಿಸುವ ಬಗ್ಗೆ ಸರ್ಕಾರ ಆಲೋಚಿಸ್ತಾ ಇದೆ. ಸರ್ಕಾರ ಸಂತ್ರಸ್ತರ ಜತೆಗಿದೆ ಅನ್ನೋ ಮಾತನ್ನ ನಾನೀ ಸಂದರ್ಭದಲ್ಲಿ ಹೇಳೋಕೆ ಇಷ್ಟಪಡ್ತಾ ಇದೇನೆ. ರಾಜ್ಯದ ಸಂಕಷ್ಟಕ್ಕೆ ಕೇಂದ್ರ ಸ್ಪಂದಿಸಿದ್ದು ವಿಪತ್ತು ಪರಿಹಾರ ನಿಧಿಯಿಂದ ಹಣ ಬಳಸಿಕೊಳ್ಳಲು ಸಮ್ಮತಿಸಿದೆ. ಆದರೆ ನಾನೀ ಸಂದರ್ಭದಲ್ಲಿ ನಾಡಿನ ಸಮಸ್ತ ಜನತೆಯ ಪರವಾಗಿ ನಮ್ಮ ರಾಜ್ಯಕ್ಕೆ ಇಪ್ಪತ್ತು ಸಾವಿರ ಕೋಟಿ ನೆರವನ್ನು ನೀಡಬೇಕಾಗಿ ಕೇಂದ್ರದಲ್ಲಿ ವಿನಂತಿ ಮಾಡಿಕೊಳ್ತೇನೆ. ಇಲಾಖಾವಾರು ನಷ್ಟದ ಅಂದಾಜು ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದು ನಷ್ಟ ಸಮೀಕ್ಷೆಗೆ ತಾಲೂಕಾವಾರು ವಿಶೇಷ ದಳಗಳನ್ನು ರಚಿಸಲಾಗಿದೆ. ಹದಿನೈದನೇ ತಾರೀಕಿನಿಂದ ರೈಲುಗಳ ಸಂಚಾರ ಪುನರಾರಂಭ ಆಗಲಿದೆ..'

'ಸರ್, ಕೆಳಗ ಸ್ಕ್ರಾಲ್ ನೋಡ್ರಿ. ಮಿಂಚೇರಿ ಮಠದ ಸ್ವಾಮೀಜಿ 5000 ಮನೆ ಕಟ್ಟಿಸಿಕೊಡ್ತೀನಿ ಅಂತ ಅನೌನ್ಸ್ ಮಾಡ್ಯಾರ' ಅಂದ ಅಬ್ದುಲ್ಲ. ತಿಮೋತಿ ನೋಡುವಷ್ಟು ಹೊತ್ತಿಗೆ ಕಾಲಕಾಲೇಶ್ವರ ಮಠದಿಂದ ನೂರು ಕ್ವಿಂಟಾಲ್ ಅಕ್ಕಿಯ ಸುದ್ದಿ ಬರುತ್ತಿತ್ತು. ಅದರ ಹಿಂದೆಯೇ ಮತ್ತೊಂದು ಮಠದ ಶ್ರೀಗಳು ಪರಿಹಾರ ನಿಧಿಗೆ ಹತ್ತು ಲಕ್ಷ, ಮನೆ ನಿರ್ಮಾಣಕ್ಕೆ 25 ಲಕ್ಷ ಹಾಗೂ ನಾಲ್ಕು ಲಾರಿ ಜೀವನಾವಶ್ಯಕ ವಸ್ತುಗಳನ್ನು ಕಳಿಸುವ ಕುರಿತು ನೀಡಿದ ಹೇಳಿಕೆ ಬರುತ್ತಿತ್ತು.




## ಬತ್ತಿ

ಮುಖದ ಮೇಲೆ
ನಗು ಚೆಲ್ಲುವವರೆಲ್ಲಾ
ಸುಖಿಗಳಲ್ಲ;
ಉರಿವ ಬತ್ತಿಯ
ನೋವು ಯಾರಿಗೂ
ಕಾಣಿಸುವುದಿಲ್ಲ!

—ಕೆ.ಬಿ. ರಂಗಸ್ವಾಮಿ